ಸಿ.ಸಿ..ನಂ.131–22

ಪಿ.ಡಬ್ಲ್ಯೂ–1

ದಿನಾಂಕ.17–12–2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ವಿ.ವಿ.ಎಸ್ ವಕೀಲರಿಂದಃ**

1 ನೀವು ಕೆಲಸದ ಆಳುಗಳನ್ನು ಪೂರೈಸು ಬಗ್ಗೆ ದಾಖಲೆ ಇಟ್ಟು ಕೊಂಡಿರುತ್ತಿರಾ ಎಂದರೆ ಆ ಬಗ್ಗೆ ಎಂಗ್ರಿಮೆಂಟ ಇರುತ್ತದೆ . ಆ ಎಂಗ್ರಿಮೆಂಟನ್ನು ಕಂಪನಿಯ ಎಮ್ ಡಿ ಜೊತೆ ಮಾಡಿಕೊಂಡಿರುತ್ತೇನೆ . ಸದ್ರಿ ಎಂಗ್ರಿಮೆಂಟನ್ನು ದಿಃ 15–9–2016 ರಲ್ಲಿ ಮಾಡಿಕೊಂಡಿರುತ್ತೇನೆ . ಸದ್ರಿ ದಾಖಲಾತಿ ನನ್ನ ಬಳಿ ಇರುತ್ತದೆ ಅದನ್ನು ಈಗಾಗಲೆ ನಾನು ನ್ಯಾಯಾಲಯಕ್ಕೆ ಹಾಜರ ಪಡಿಸಿರುತ್ತೇನೆ . ಲೇಬರ ವನ್ನು ಪೂರೈಕೆ ಮಾಡುವುದು ಇದ್ದರೆ labours ಗಳ ಲೈಸೆನ್ಸ ಬೇಕಾಗುತ್ತದೆ ಎಂದರೆ ನನ್ನ ಬಳಿಯಲ್ಲಿ ಕಂಟ್ರಾಕ್ಟರ ಲೈಸೆನ್ಸ ಇದೆ ಇರುತ್ತದೆ ಹಾಗಾಗಿ labours ಪೂರೈಕೆ ಮಾಡಬಹುದು . ಕಂಟ್ರಾಕ್ಟ ರ ಲೈಸೆನ್ಸ ವನ್ನು ಕಾಮಗಾರಿ ಕೆಲಸಕ್ಕೆ ಅಂದರೆ ರೋಡ ಕೆಲಸ ಇತರ ಕಾಮಗಾರಿ ಕೆಲಸಕ್ಕೆ ಮಾಡಿಕೊಂಡಿರುತ್ತೇನೆ . ಕಂಟ್ರಾಕ್ಟರ ಲೈಸೆನ್ಸ ವನ್ನು ನ್ಯಾಯಾಲಯದ ಮುಂದೆ ಹಾಜರ ಪಡಿಸಿಲ್ಲ ಎಂದರೆ ಅವಶ್ಯ ಇದ್ದರೆ ಹಾಜರ ಪಡಿಸುತ್ತೇನೆ . ಆ ಕಂಟ್ರಾಕ್ಟರ ಲೈಸೆನ್ಸ ವನ್ನು ಬೇರೆ job work ಗೆ ಕಳುಹಿಸಬಹುದು ಎಂಬ ಷರತ್ತು ಇರುತ್ತದೆಯಾ ಎಂದರೆ ಹಾಗೆನಿಲ್ಲ ನಾನು ಆ ಲೈಸೆನ್ಸ ಪ್ರಕಾರ ಎಲ್ಲಾ ಕೆಲಸ ಮಾಡಿಸುತ್ತಿದ್ದೆ .

2. ನಾನು ಆದಾಯ ತೆರಿಗೆ ಪಾವತಿದಾರನಾಗಿರುತ್ತೇನೆ . ಸದ್ರಿ income tax returns ದಲ್ಲಿ forest food partner ship ದೊಂದಿಗೆ ಇಷ್ಟು labours ವನ್ನು ಪೂರೈಕೆ ಮಾಡುತ್ತೇನೆ ಅದರಿಂದ ನನಗೆ ಇಷ್ಟು turn over ಬರುತ್ತದೆ ಎಂದು ಕಾಣಿಸಿರುತ್ತಿರಾ ಎಂದರೆ ನಾನು ಹಣ ಬಂದ ಬಗ್ಗೆ ನನ್ನ CA ಬಳಿ ತೋರಿಸಿರುತ್ತೇನೆ . ಆರೋಪಿಯಿಂದ ರೂ 25 ಲಕ್ಷ ಹಣ ಬರಬೇಕು ಎಂದು ನಿವೇನಾದರೂ income tax return ದಲ್ಲಿ ಕಾಣಿಸಿರುತ್ತಿರಾ ಎಂದರೆ ಬರಬೇಕಾದ ಹಣ ಕಾಣಿಸುವುದಿಲ್ಲ ಬಂದಿರುವ ಹಣ ಕಾಣರುತವೆ . labours ಗಳನ್ನು ಸಪ್ಲಾ ಯ ಮಾಡುತ್ತೇನೆ ಎಂದು ಪೋಲಿಸರಿಗೆ ದಾಖಲೆ ಕೊಟ್ಟಿರುತ್ತೀರಾ ಎಂದರೆ ದಿಃ29–12–2017 ರಂದು ನನಗೆ ಮೋಸ ಅದ ಬಗ್ಗೆ ದೂರನ್ನು ಕೊಟ್ಟಿರುತ್ತೇನೆ .

ಆ ದೂರಿಗೆ ಸಂಭಂಧಿಸಿದಂತೆ ಪೋಲಿಸರು ಏನು ಅಂತಿಮ ವರದಿ ಹಾಕಿರುತ್ತಾರೆ ಎಂದರೆ ಅದರಿಂದ ನನಗೆ ನ್ಯಾಯ ಸಿಕ್ಕಿಲ್ಲ ಆ ಕಾರಣದಿಂದ ನಾನು ನ್ಯಾಯಾಲಯದಲ್ಲಿ ಖಾಸಗಿ ದೂರನ್ನು ಕೊಟ್ಟಿರುತ್ತೇನೆ . ಪೋಲಿಸರಿಂದ ನ್ಯಾಯ ಸಿಕಿಲ್ಲ ಎಂದು ಪೋಲಿಸ ಮೇಲಾಧಿಕಾರಿ ಬಳಿಯಲ್ಲಿ ದೂರನ್ನು ಕೊಟಿರುತ್ತಿರಾ ಎಂದರೆ ಅವರಲ್ಲಿ ನಾನು ನನಗೆ ಅನ್ಯಾಯದ ಬಗ್ಗೆ ಹೇಳಿದ್ದೆ ಅದರೆ ನ್ಯಾಯಾಲಯದಲ್ಲಿ ಖಾಸಗಿ ದೂರನ್ನು ಕೊಟ್ಟದೆ ಸದ್ರಿ ವಿಚಾರವನ್ನು ನಾನು ಪೊಲಿಸರ ಬಳಿ ಮೌಖಿಕವಾಗಿ ಹೇಳಿದ್ದೆ. ಲೀಖಿತವಾಗಿ ಹೇಳಲು ನಿಮಗೆ ಯಾವುದೆ ತೊಂದರೆ ಇರಲಿಲ್ಲ ಎಂದರೆ ಹಣದ ಆಮಿಷದಿಂದ ನನಗೆ ಪೋಲಿಸರಿಗೆ ಕೊಟ್ಟ ದೂರಿನಲ್ಲಿ ನ್ಯಾಯ ಸಿಗಲಿಲ್ಲ ಆ ಕಾರಣದಿಂದ ಕೊರ್ಟಗೆ ದೂರನ್ನು ಕೊಟ್ಟಿರುತ್ತೇನೆ . ಪೊಾಲಿಸರ ದೂರಿನಲ್ಲಿ ಶ್ರೀಧರ , ದೇವಕಿ ಶ್ಯಾಮಸುಂದರ ಮೇಲೆ ಕೆಸನ್ನು ಕೊಟ್ಟಿರುತ್ತೇನೆ . ದೇವಕಿ ಶ್ಯಾಮಸುಂದರವನ್ನು ಈ ಪ್ರಕರಣದಲ್ಲಿ ಸಾಕ್ಷಿದಾರರನ್ನಾಗಿ ಮಾಡಿಸಿದ್ದೀರಿ ಎಂದರೆ ಅವರಿಗೂ ಸಹ ಆರೋಪಿಯು ಮೋಸ ಮಾಡಿದ್ದು ಆ ಕಾರಣದಿಂದ ನೀನು ನ್ಯಾಯಾಲಯದಲ್ಲಿ ದೂರನ್ನು ಕೊಟ್ಟರೆ ನಾವು ಸಾಕ್ಷ್ಯೆ ನುಡಿಯಲು ಬರುತ್ತೇವೆ ಎಂದು ಹೇಳಿದ ಕಾರಣ ಅವರನ್ನು ಸಾಕ್ಷಿದಾರರನ್ನಾಗಿ ಮಾಡಿರುತ್ತೇನೆ . ಈ ರೀತಿಯಾಗಿ ದೂರನ್ನು ಕೊಡುತ್ತಿದ್ದೇನೆ ಎಂದು ಶ್ಯಾಮಸುಂದರ ಮತುತ ದೇವಕಿಗೆ ದೂರನ್ನು ಕೊಡುವ ಮೊದಲು ಹೇಳಿರುತ್ತೇನೆ . ನಮ್ಮ ನಮ್ಮಲ್ಲೆ ಹೊಂದಾಣಕೆ ಆಗುತ್ತದೆ ಮತ್ತು settlement ಅಗುತ್ತದೆ ಎಂದು ನಾವು ಸುಮ್ಮನೆ ಇದ್ದೆವು . ಶ್ಯಾಮಸುಂದರ ಮತ್ತು ದೇವಕಿ forest wood ದಲ್ಲಿ ಕೆಲಸ ಮಾಡುತ್ತಿದ್ದರು ಎಂದು ತೋರಿಸಲು ನಿಮ್ಮ ಬಳಿ ದಾಖಲಾತಿ ಇದೆಯಾ ಎಂದರೆ ದೇವಕಿಯ ದಾಖಲಾತಿಯನ್ನು ಕಂಪನಿಯಿಂದ ಪೆಡದುಕೊಳ್ಳಬಹುದು ಆದರೆ ಶ್ಯಾಮಸುಂದರ ನಮ್ಮ ಬಳಿ ಇದ್ದು ಲೇಬರ ಕಂಟ್ರಾಕ್ಟ ಲೆಕ್ಕ ಮಾಡುತ್ತಿರುವುದರಿಂದ ಕಂಪನಿಯಿಂದ ಆತನ ದಾಖಲಾತಿ ಸಿಗುವುದಿಲ್ಲ. ಶ್ಯಾಮಸುಂದರ ರವರಿಗೆ ತಿಂಗಳ ಸಂಬಳವನ್ನು ನಾನು ಮಾಡುತಿರಲಿಲ್ಲ ಆರೋಪಿ ಮಾಡುತ್ತಿದ್ದನು . ದೇವಕಿ ರವರು ಆ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ದಾಖಲಾತಿ ನ್ಯಾಯಾಲಯಕ್ಕೆ ಹಾಜರ ಪಡಿಸಲು ನಿಮಗೆ ತೊಂದರೆ ಇಲ್ಲ ಎಂದರೆ ಕಂಪನಿಯವರು ಕೊಟ್ಟರೆ ತಂದು ಹಾಜರ ಪಡಿಸುತ್ತೇನೆ . ಖಾಸಗಿ ದೂರಿನಲ್ಲಿ ಪೋಲಿಸರು ಸಲ್ಲಿಸಿದರು ಎನ್ನಲಾದ ವರದಿ ಏನಾಗಿದೆ ಎಂದರೆ ಏನಾಗಿದೆ ಎಂದು ನನಗೆ

ಗೊತ್ತಿಲ್ಲ . ಸದ್ರಿ ಖಾಸಗಿ ದೂರಿನಲ್ಲಿ ನೀವು ಸಾಕ್ಷಿದಾರರಾಗಿ ಹಾಜರಾಗಿಲ್ಲ ಎಂದರೆ ಆ ದೂರು ಪ್ರಯೋಜನಕ್ಕೆ ಬರಲಿಲ್ಲ .

3. ಲೇಬರ ಗಳ ಯಾದಿ ನಿಮ್ಮ ಬಳಿ ಇದೆಯಾ ಎಂದರೆ ಅದನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ . ಅದನು ನ್ಯಾಯಾಲಯಕ್ಕೆ ಸೃಷ್ಟಿ ಮಾಡಿ ಹಾಜರಪಡಿಸಿರುತ್ತೇನೆ ಎಂದರೆ ಸರಿಯಲ್ಲ . ಲೇಬರ ಯಾದಿಯಲ್ಲಿ ಇರುವವರನ್ನು ನ್ಯಾಯಾಲಯಕ್ಕೆ ಹಾಜರ ಪಡಿಸಿ ಸಾಕ್ಷಿದಾರರನ್ನಾಗಿ ಮಾಡುತ್ತಿರಿ ಎಂದರೆ ಸರಿ . ಸಾಕ್ಷಿ ಪುನಃ ಮುದುವರೆದು ನನ್ನ ಅಕೌಂಟ ದಿಂದ ಅವರಿಗೆ ಹೋಗಿರುತ್ತದೆ labours ರಿಗೆ ಸಂಬಳದಲ್ಲಿ ಅರ್ಧ ವನ್ನು ನಗದಿನ ರೂಪದಲ್ಲಿ ಕೊಡುತ್ತಿದ್ದು ಉಳಿದ ಅರ್ಧ ಹಣವನ್ನು RTGS ಮುಖಾಂತರ ಸಂದಾಯ ಮಾಡುತ್ತಿದ್ದೆ . RTGS ಮಾಡಬೇಕೆದರೆ ನಿಮ್ಮ ಖಾತೆಯಿಂದ ಹಣ ಹೊಗುತ್ತದೆ ಎಂದರೆ ಸರಿ . ನಿಮ್ಮ ಖಾತೆಯ ಪುಸ್ತಕನ್ನು ನ್ಯಾಯಾಲಯಕ್ಕೆ ಹಾಜರ ಪಡಿಸಿದೆರೆ ನಿಮ್ಮ ಖಾತೆಯಿಂದ ಎಷ್ಟು ಹಣ RTGS ಮುಖಾಂತರ ಹೋಗಿರುತ್ತದೆ ಎಂದು ಕಾಣುತ್ತದೆ ಎಂದರೆ ಸರಿ .

( ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು , ಕಾಲಾವಕಾಶ ನೀಡಲಾಯಿತು .)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.